ಸಿ.ಇ.ಟಿ ಕಟ್ಟಡ ಇಲ್ಲದೆ ಸಾರ್ವಜನಿಕರಿಗೆ ತೊಂದರೆ

2965 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಿಗಧಿತ ಕಟ್ಟಡ ಇನ್ನೂ ಸಿದ್ಧವಾಗದೆ ಇರುವುದರಿಂದ ಸಿ ಇ ಟಿ ಘಟಕಕ್ಕೆ ಬರುವ ವಿದ್ಯಾರ್ಥಿ : ಪಾಲಕರು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಕಟ್ಟಡ, ಸಿದ್ಧಗೊಳಿಸುವುದಕ್ಕಾಗಿ ಸರ್ಕಾರ ಕೈಗೊಳ್ಳಲಿರುವ ಕ್ರಮ ಏನು?*

ಈ) *ಈಗ ಕಟ್ಟಡ ಯಾವ ಹಂತದಲ್ಲಿದೆ, ಪೂರ್ಣಗೊಳ್ಳಲು ಎಷ್ಟು ಸಮಯ ಬೇಕಾಗುವುದು?*

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಬೆಂಗಳೂರಿನ ಮಲ್ಲೇಶ್ವರಂ 18ನೇ ಅಡ್ಡ ರಸ್ತೆಯಲ್ಲಿರುವ ಸರ್ಕಾರಿ ಕಿರಿಯ ಕಾಲೇಜಿನ ಆವರಣದಲ್ಲಿ ಕಟ್ಟಡ ಕಟ್ಟಲು ಅನುಮೋದನೆ ನೀಡಲಾಗಿದ್ದು ಸದರಿ ಕಟ್ಟಡದ ಗುತ್ತಿಗೆಯನ್ನು ಬೆಂಗಳೂರಿನ ರೈಟ್ಸ್ ಸಂಸ್ಥೆಗೆ ವಹಿಸಲಾಗಿದೆ.

ಇ) ಸಂಸ್ಥೆಯು ಟೆಂಡರ್ ಕರೆಯುವ ಹಂತದಲ್ಲಿದೆ.

ಕಾಲೇಜು ಕಟ್ಟಡ

2967 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಹೊಸದಾಗಿ ಕಾಲೇಜು ಕಟ್ಟಡ ಕಟ್ಟುವ ಕೆಲಸ ಪ್ರಗತಿಯಲ್ಲಿದೆಯೇ? ಅದಕ್ಕೆ ಬೇಕಾಗುವ ಹಣವೆಷ್ಟು? ಮಂಜೂರಾದ ಮೊತ್ತವೆಷ್ಟು? (ವಿಸ್ತಾರವಾದ ಮಾಹಿತಿ ಒದಗಿಸುವುದು)*

ಆ) *ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಲೇಜು ಕಟ್ಟಡ ಕಟ್ಟುವ ಕೆಲಸ ಪ್ರಗತಿಯಲ್ಲಿದೆಯೇ ಅದಕ್ಕೆ ಬೇಕಾಗುವ ಹಣವೆಷ್ಟು? ಮಂಜೂರಾದ ಮೊತ್ತ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)*

ಇ) *ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರದ ತಾಲ್ಲೂಕಿನ ಕಾಲೇಜು ಕಟ್ಟಡಕ್ಕೆ ಬೇಕಾಗುವ ಹಣವೆಷ್ಟು? ಮಂಜೂರಾದ ಮೊತ್ತವೆಷ್ಟು?*